<u>ದಿನಾಂಕಃ **07/01/2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ **1** ರಿಂದ **3** ಮತ್ತು **7**ನೇ ಪ್ರತಿವಾದಿ ಪರವಾಗಿ ಶ್ರೀ ಎಸ್ ಎ ಎ ವಕೀಲರಿಂದಃ</u>

1. ನನ್ನ ತಂದೆಯ ಹೆಸರು ಸಿದ್ದಲಿಂಗಪ್ಪ ಎಂದರೆ ಸರಿ. ನನ್ನ ತಂದೆಯವರಿಗೆ ಬೇರೆ ಹೆಸರು ಇರಲಿಲ್ಲ. ಅವರಿಗೆ ಸಿದ್ದಲಿಂಗಪ್ಪ ಎಂಬ ಒಂದೇ ಹೆಸರು ಇತ್ತು. ನನ್ನ ತಾತ ಅಲ್ಲಪ್ಪಶೆಟ್ಟಿ ರವರಿಗೆ 3 ಜನ ಮಕ್ಕಳು. ಅವರುಗಳೆಂದರೆ ತೋಟಪ್ಪ, ಸಿದ್ದಲಿಂಗಪ್ಪ ಮತ್ತು ಚಂದ್ರಶೇಖರ. ಅವರ ಹೆಣ್ಣು ಮಕ್ಕಳು ತೀರಿಕೊಂಡಿರುತ್ತಾರೆ. ಸದರಿ ತೋಟಪ್ಪ, ಸಿದ್ದಲಿಂಗಪ್ಪ ಮತ್ತು ಚಂದ್ರಶೇಖರ ತೀರಿಕೊಂಡಿದ್ದಾರೆ. ಸದರಿ ತೋಟಪ್ಪ, ಸಿದ್ದಲಿಂಗಪ್ಪ ಮತ್ತು ಚಂದ್ರಶೇಖರ ರವರು ವಿಭಾಗ ಮಾಡಿಕೊಂಡಿದ್ದರು. ಆ ರೀತಿ ವಿಭಾಗ ಮಾಡಿಕೊಂಡಿರುವ ಸಂಬಂಧ ನನ್ನ ಬಳಿ ದಾಖಲಾತಿ ಇರುವುದಿಲ್ಲ. ನನ್ನ ತಂದೆ ಸಿದ್ದಲಿಂಗಪ್ಪ ತೀರಿಕೊಂಡು 32 ವರ್ಷಗಳು ಆಗಿವೆ. ನನ್ನ ತಂದೆ ಜೀವಂತ ಇದ್ದಾಗಲೇ ವಾದಿಯರ ಮದುವೆ ಮಾಡಿಕೊಟ್ಟಿರುತ್ತಾರೆ.

2. ನನ್ನ ತಂದೆಯವರು ಮೃತಪಡುವ ಮೊದಲೇ ಗಂಡು ಮಕ್ಕಳಾದ ಎ.ಎಸ್.ಶಿವಕುಮಾರ ಮತ್ತು ಸಿದ್ದಲಿಂಗಸ್ವಾಮಿ ರವರ ಮದುವೆ ಆಗಿತ್ತು. ನನ್ನ ತಂದೆ ತೀರಿಕೊಂಡ ನಂತರ ಎ.ಎಸ್.ಬಾಬು ಮತ್ತು ಎ.ಎಸ್.ರಾಜೇಂದ್ರ ಕುಮಾರ್ ರವರ ವಿವಾಹ ಆಗಿರುತ್ತದೆ. ನನ್ನ ತಂದೆಯವರು ಮಕ್ಕಳ ನಡುವೆ ಮನಸ್ತಾಪ ಬರಬಾರದು ಎಂಬ ಉದ್ದೇಶದಿಂದ ಅವರು ಜೀವಂತ ಕಾಲದಲ್ಲಿಯೇ ದಾವಾ ಸ್ವತ್ತುಗಳ ವಿಭಾಗವನ್ನು ಗಂಡು ಮಕ್ಕಳಿಗೆ ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಸದರಿ ವಿಭಾಗದಲ್ಲಿ ದಾವಾ ಐಟಂ ನಂ.2 ರಲ್ಲಿ 26 ½ ಗುಂಟೆ ಜಮೀನು ಮತ್ತು ಐಟಂ ನಂ.5 ರ ನಿವೇಶನ ಎ.ಎಸ್.ಸಿದ್ದಲಿಂಗಸ್ವಾಮಿ ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಎ.ಎಸ್.ಸಿದ್ದಲಿಂಗಸ್ವಾಮಿ ಯವರು ತೀರಿಕೊಂಡು 18 ವರ್ಷ ಆಗಿದೆ ಎಂದರೆ ಸರಿ. ಎ.ಎಸ್.ಸಿದ್ದಲಿಂಗಸ್ವಾಮಿ ಯವರು ತೀರಿಕೊಳ್ಳುವ ವರೆಗೆ ಅವರ ಹಿಸ್ಸೆಗೆ ಬಂದ ಜಮೀನು ಹಾಗೂ ನಿವೇಶನವು ಅವರ ಸ್ವಾಧೀನದಲ್ಲೇ ಇತ್ತು ಎಂದರೆ ಸರಿಯಲ್ಲ. ನಂತರ ಜಮೀನು ಮತ್ತು ನಿವೇಶನದ ಸ್ವಾಧೀನವು ಎ.ಎಸ್.ಸಿದ್ದಲಿಂಗಸ್ವಾಮಿಯವರ ಮಕ್ಕಳಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಐಟಂ ನಂ.2 ರ 26 ½ ಗುಂಟೆ ಜಮೀನು ಮತ್ತು ಐಟಂ ನಂ.6 ರಲ್ಲಿರುವ ನಿವೇಶನ ಹಾಗೂ ಮನೆ 7ನೇ ಪ್ರತಿವಾದಿಯಾದ ಎ.ಎಸ್.ಬಾಬು ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಇಂದಿಗೂ ಸಹ 7ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುವ ಸ್ವತ್ತು ಅವರ

ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ಐಟಂ ನಂ.1 ಮತ್ತು 2 ರ ಜಮೀನು ಮತ್ತು ಐಟಂ ನಂ.4 ರಲ್ಲಿರುವ ಮನೆ ಎ.ಎಸ್.ಶಿವಕುಮಾರ್ ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ಸರಿಯಲ್ಲ. ಎ.ಎಸ್.ಶಿವಕುಮಾರ್ ರವರು ತೀರಿಕೊಂಡು 15 ವರ್ಷಗಳು ಆಗಿವೆ. ಎ.ಎಸ್.ಶಿವಕುಮಾರ್ ರವರು ತೀರಿಕೊಂಡ ನಂತರ ಅವರ ವಾರಸುದಾರರ ಪ್ರತಿವಾದಿ ನಂ.1 ರಿಂದ 3 ರವರ ಹಿಸ್ಸೆಗೆ ಐಟಂ ನಂ.1, 2 ರ ಜಮೀನು ಮತ್ತು ಐಟಂ ನಂ. 4 ರಲ್ಲಿರುವ ಮನೆ ಬಂದಿರುತ್ತದೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಸಹಿ/-

(ನಾಗೇಶ ಮೂರ್ತಿ ಬಿ.ಕೆ)

ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,

ಅರಕಲಗೂಡು